**ಸಾಕ್ಷಿಯನ್ನು ದಿಃ 27-10-2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ಸರ್ವೇ ನಂಬರ್ 52 ರಲ್ಲಿ ಒಟ್ಟು ವಿಸ್ತೀರ್ಣ ಎಷ್ಟಿದೆ ಗೊತ್ತಿಲ್ಲ. ಸರ್ವೇ ನಂಬರ 52/2 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ. 1974 ರಲ್ಲಿ ಸದರಿ ಜಮೀನು ಯಾರ ಹೆಸರಿನಲ್ಲಿತ್ತು ಮತ್ತು ಎಷ್ಟು ವಿಸ್ತೀರ್ಣ ಇತ್ತು ನನಗೆ ಗೊತ್ತಿಲ್ಲ. 1974 ರಲ್ಲಿ ಎರಡು ಗುಂಟೆ ಜಮೀನನ್ನು ರಾಮಪ್ಪ ಅಂದರೆ ಪ್ರತಿವಾದಿ 1 ಖರೀದಿ ಮಾಡಿದ್ದಾರೆ. 1974 ರಲ್ಲಿ ಮುನಿಶಾಮಪ್ಪನ ಹೆಸರಿನಲ್ಲಿದ್ದ ಪಹಣಿಯನ್ನು ನೋಡಿದ್ದೇನೋ ಇಲ್ಲವೋ ನನಗೆ ಗೊತ್ತಿಲ್ಲ. ಮುನಿಶಾಮಪ್ಪನಿಗೆ ಆತನ ತಾತನ ಕಡೆಯಿಂದ ಸದರಿ ಎರಡು ಗುಂಟೆ ಬಂದಿದ್ದು, ತಾತನ ಹೆಸರು ಗೊತ್ತಿಲ್ಲ. 1986 ರಿಂದ ವಾದಿಯ ಗಂಡನಾದ ಸುಬ್ಬರಾಯಪ್ಪನೇ 12 ಗುಂಟೆ ಜಮೀನಿನ ಸ್ವಾಧೀನದಲ್ಲಿದ್ದ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಎರಡು ಗುಂಟೆ ಜಾಗ ಖರೀದಿ ಮಾಡಿರುವ ಬಗ್ಗೆ ಯಾವುದೇ ದಾಖಲೆ ನೋಡಿಲ್ಲ ಆದರೆ ಆತನೇ ಸ್ವಾಧೀನದಲ್ಲಿರುವುದು ನೋಡಿದ್ದೇನೆ. ಇಂದಿಗೂ ಕೂಡ ಎರಡು ಗುಂಟೆ ಜಮೀನು ಮುನಿಶಾಮಪ್ಪನಿಗೆ ಸೇರಿದ ಯಾವುದೇ ದಾಖಲೆ ನಾನು ನೋಡಿಲ್ಲ. ನಾನು 1 ನೇ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎರಡು ಗುಂಟೆ ಜಮೀನಿನಲ್ಲಿರುವ ಮರ ಮತ್ತು ತಿಪ್ಪೆಗೆ ವಾದಿಯರೇ ಸ್ವಾಧೀನಾನುಭವದಲ್ಲಿದ್ದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಚಂದ್ರಶೇಖರ್ ಅಲಬೂರ್)**
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ

**DW-3**

**ಸಾಕ್ಷಿಯನ್ನು ದಿಃ 27-10-2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ಸರ್ವೇ ನಂಬರ್ 52/2ರಲ್ಲಿ ನನಗೆ ಸೇರಿದ ಜಮೀನು ಈಗ ಇಲ್ಲ ಮೊದಲು ಇತ್ತು. ಸುಮಾರು ಐವತ್ತು ವರ್ಷಗಳ ಹಿಂದೆ ಇತ್ತು. ಅದಕ್ಕೆ ಸಂಬಂಧಪಟ್ಟ ಪಹಣಿಗಳನ್ನು ನಾನು ಹಾಜರು ಮಾಡಿಲ್ಲ. ನನ್ನ ಜಮೀನನ್ನು ನಾರಾಯಣಪ್ಪ ಎನ್ನುವ ವ್ಯಕ್ತಿಗೆ ಮಾರಾಟ ಮಾಡಿದ್ದೇನೆ. ನಾನು ಮುನಿಶಾಮಪ್ಪ ಬಿನ್ ಚೆನ್ನಪ್ಪರವರಿಂದ ಜಮೀನು ಖರೀದಿ ಮಾಡಿದ್ದೆ.

ಮುನಿಶಾಮಿಗೆ ಸಂಬಂಧಪಟ್ಟ ಸರ್ವೇ ನಂಬರ್ 52/2 ಯಾವ ದಿಕ್ಕು, ಯಾವ ಕಡೆ ಇತ್ತು, ಎಂದರೆ ಸಾಕ್ಷಿಯು ಪೂರ್ವ-ಉತ್ತರವಾಗಿ ಇತ್ತು ಎಂದು ನುಡಿಯುತ್ತಾರೆ. ಮುನಿಶಾಮಿ ಹೆಸರಿನಲ್ಲಿ ಎರಡು ಗುಂಟೆ ಇತ್ತು ಎಂದು ಯಾವುದೇ ಪಹಣಿ ಮ್ಯುಟೇಶನ್ ನೋಡಿಲ್ಲ. ಪಹಣಿ ಮ್ಯುಟೇಶನ್ ಇಲ್ಲದೇ ಮಾರಾಟ ಮಾಡಲು ಸಾಧ್ಯವಿಲ್ಲ ಎಂದರೆ ನನಗೆ ಗೊತ್ತಿಲ್ಲ. 1986 ರಿಂದ ಪ್ರಸ್ತುತ ದಾವೆ ಸಲ್ಲಿಸುವವರಿಗೂ ಪಹಣಿ ಯಾರ ಹೆಸರಿಗಿತ್ತು ನಾನು ನೋಡಿಲ್ಲ.

1 ನೇ ವಾದಿ ಪೂರ್ವಕ್ಕೆ ತಿಪ್ಪೆ ಹಾಕಿಕೊಂಡಿರುತ್ತಾರೆ. ತಿಪ್ಪೆ ಪಕ್ಕದಲ್ಲಿ ರಾಗೀಮರ ಇದೆ. ಇಂದಿಗೂ ಎರಡು ಗುಂಟೆ ಜಾಗವನ್ನು ಒಳಗೊಂಡಂತೆ ವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಎರಡು ಗುಂಟೆ ಜಮೀನಿನಲ್ಲಿ 1 ನೇ ಪ್ರತಿವಾದಿ ಇದ್ದು, ಅದರ ಪಕ್ಕದಲ್ಲಿ ವಾದಿ ಇರುತ್ತಾರೆ ಎಂದು ನುಡಿಯುತ್ತಾರೆ. ತಿಪ್ಪೆಯಲ್ಲಿ ಗೊಬ್ಬರವನ್ನು ತೆಗೆಯಲು ಸಹ 1 ನೇ ಪ್ರತಿವಾದಿ ಬಿಡುತ್ತಿಲ್ಲ ಆ ವಿಷಯ ನನಗೆ ಗೊತ್ತಿದೆ. ಸಾಕ್ಷಿ ಮುಂದುವರೆದು ದಾವೆ ಹೂಡಿದ ಬಳಿಕ ವಾದಿ ಪ್ರತಿವಾದಿಯರು ಜಗಳ ಮಾಡಿಕೊಂಡಿರುತ್ತಾರೆ. ಎರಡು ಗುಂಟೆ ಜಮೀನಿಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸುಳ್ಳು ತಕರಾರು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 52/2 ರ ದಕ್ಷಿಣದ ಕಡೆ ನನ್ನ ಜಮೀನು ಇದೆ. ಯಾವುದೇ ಜಮೀನು ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಚಂದ್ರಶೇಖರ್ ಅಲಬೂರ್)**
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ